ಸಾಕ್ಷಿಯನ್ನು ದಿಃ **16.10.2024** ರಂದು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯವರ ಪರ ಶ್ರೀ ಬಿ.ಎಸ್.ವೈ ವಕೀಲರಿಂದಃ-

ನಿಪಿ -84 ರ ದಾಖಲೆಯನ್ನು ತಾಲ್ಲೂಕು ಕಛೇರಿಯಿಂದ ನಾನೇ ಅರ್ಜಿ ಕೊಟ್ಟು ಪಡೆದುಕೊಂಡಿದ್ದೇನೆ. ನಾನು ಅರ್ಜಿ ಕೊಟ್ಟ ಬಗ್ಗೆ ನಿಪಿ-84 ರಲ್ಲಿ ನಮೂದಾಗಿಲ್ಲ. ನಿಪಿ-84 ರ ದಾಖಲೆಯನ್ನು ಯಾವ ಕಾರಣಕ್ಕಾಗಿ ಹಾಜರುಪಡಿಸಿದ್ದೀರಾ ಎಂದರೆ ಚಂದ್ರೇಗೌಡ ,

ಶಿವಣ್ಣೇಗೌಡ ರವರು ಸೋಮೇಗೌಡರ ಮಕ್ಕಳು ಎಂದು ತೋರಿಸಲು ಹಾಜರುಪಡಿಸಿದ್ದೇನೆ. ಯಾವುದೇ ಸಂಬಂಧವನ್ನು ಸೂಚಿಸುವಾಗ ತಂದೆ ಮಕ್ಕಳಾದರೆ ಬಿನ್ ಎಂದು ಗಂಡ ಹೆಂಡತಿ ಆದರೆ ಕೋಂ ಎಂದು ಇರುತ್ತದೆ ಎಂದರೆ ಸರಿ. ನಿಪಿ-84 ರ ದಾಖಲೆಯಲ್ಲಿ ಬಿನ್ ಅಥವಾ ಕೋಂ ಇದೆಯಾ ಎಂದರೆ ಇಲ್ಲ ಸಾಕ್ಷಿ ಮುಂದುವರೆದು ಮತದಾರರ ಪಟ್ಟಿಯಲ್ಲಿ ಆ ರೀತಿ ಇರುವುದಿಲ್ಲ ಎಂದು ನುಡಿಯುತ್ತಾರೆ. 92-93 ನೇ ಸಾಲಿನ ಮತದಾರರ ಪಟ್ಟಿಯನ್ನು ಹಾಜರುಪಡಿಸಿದ್ದೇನೆ. 1960 ರಿಂದ 1992 ರ ವರೆಗಿನ ಮತದಾರರ ಪಟ್ಟಿಯನ್ನು ಪಡೆಯಲು ಪ್ರಯತ್ನಿಸಿದ್ದೀರಾ ಎಂದರೆ ಇಲ್ಲ. ನಾನು ಮತ್ತು ಪ್ರತಿವಾದಿಗಳು ಸಂಬಂಧಿಗಳು ಅಲ್ಲ ಎಂದರೆ ಸರಿಯಲ್ಲ. ಸಂಬಂಧವನ್ನು ಸೂಚಿಸಲು ನಿಪಿ-84 ರ ಸುಳ್ಳು ದಾಖಲೆಯನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯ ಆಸ್ತಿಯನ್ನು ಕಬಳಿಸಬೇಕೆಂದು ಸುಳ್ಳು ದಾವೆ ಸಲ್ಲಿಸಿ ಸುಳ್ಳು ದಾಖಲೆಯನ್ನು ಹಾಜರುಪಡಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೇ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.